# ಮಾರಣಾಂತಿಕ ಕಾಯಿಲೆಗಳಿಗೆ ರಾಜೂಬಾಣ

## ಹೀಗೊಬ್ಬ ಐಎಎಸ್ ಅಧಿಕಾರಿಯ ಕೈ ಚಳಕ

ಬೆಂಗಳೂರು: ಆಧುನಿಕ ಜೀವನದ ಭರಾಟೆಯಿಂದಾಗಿ ಅನೇಕ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಸನಾತನ, ಪರಂಪರೆಯ ಆರ್ಯುವೇದದಿಂದ ವಾಸಿಯಾಗಲಾರದ ಕಾಯಿಲೆಗಳನ್ನೂ ಸಹ ಗುಣಪಡಿಸಬಹುದು ಎನ್ನುವುದು ಈ ಐಎಎಸ್ ಅಧಿಕಾರಿಯ ಬಲವಾದ ನಂಬಿಕೆ. ಬಯಲುಸೀಮೆಯ ಚಿಕ್ಕಬಳ್ಳಾಪುರ ಜಿಲ್ಲೆಯ ಶಿಡ್ಲಘಟ್ಟ ಬಳಿಯ ಮಳ್ಳೂರಿನ ರಾಜೂ ಸದ್ಯ ಬಿಹಾರ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿರಿಯ ಐಎಎಸ್ ಅಧಿಕಾರಿ. ಓದಿದ್ದು ಐಎಎಸ್ ಆದರೂ ವೇದ ವೈದ್ಯ ಪದ್ಧತಿಗೆ ತಮ್ಮನ್ನು ತಾವು ಅರ್ಪಿಸಿಕೊಳ್ಳುವುದಕ್ಕೆ ಕಾರಣವೂ ಇದೆ.

"ಸಂಯುಕ್ತ ಕರ್ನಾಟಕ" ಕಾರ್ಯಾಲಯಕ್ಕೆ ಭೇಟಿ ನೀಡಿ ಸಂವಾದದಲ್ಲಿ ಮಾತನಾಡಿದ ಅವರು ವೇದಿಕ್ ಆಯುರ್ವೇದ ಪದ್ಧತಿ, ತಾವು ಗಿಡಮೂಲಿಕೆಗಳಿಂದ ಔಷಧಿ ತಯಾರಿಸಿ ಪ್ರಯೋಗ ಮಾಡಿದ್ದು, ಅದರಲ್ಲಿ ಯಶಸ್ವಿ ಪಡೆದಿದ್ದು, ವೈದ್ಯಪದ್ಧತಿಯ ಜತೆಗೆ ಕೋಲಾರ ಜಿಲ್ಲೆಯಲ್ಲಿ ಲಕ್ಷ, ಲಕ್ಷ ಗಿಡಗಳನ್ನು ನೆಟ್ಟಿದ್ದು, ಆಗಿನ ರಾಷ್ಟ್ರಪತಿ ಡಾ.ಎಪಿಜೆ ಅಬ್ದುಲ್ ಕಲಾಂ ಅವರು ಮೆಚ್ಚುಗೆ ಮಾತುಗಳನ್ನಾಡಿದ್ದು, ಮುಂದೆ ಈ ಪದ್ಧತಿ ಬೆಳೆಯಬೇಕಾದ ರೀತಿಯ ಬಗ್ಗೆ ತಿಳಿಸಿದರು.

'ಅದು 1973 ರ ಸಮಯ ನನಗೆ ಅರ್ಥರೈಟಿಸ್ ಕಾಯಿಲೆ ಇತ್ತು. ನಂತರ ನಾನು ಕೃಷಿ ಪದವಿಯಲ್ಲಿ ಓದುತ್ತಿರುವಾಗ ಗಿಡಮೂಲಿಕೆಗಳಿಂದ ಔಷಧಿ ಯಾಕೆ ಕಂಡು ಹಿಡಿಯಬಾರದು ಎಂದು ಪದೇ, ಪದೇ ಅನಿಸುತ್ತಿತ್ತು. ಮುಂದೆ ನನ್ನ ತಂಧೆಗೆ ಒಂದು ಕಿಡ್ನಿ ಸಮಸ್ಯೆ ಆಯಿತು. ವಿದೇಶದಲ್ಲಿ ಚಿಕಿತ್ಸೆ ಕೊಡಿಸಿದೆ. ಅಲ್ಲಿಂದ ಬಂದ ಮೇಲೆ ಮತ್ತೊಂದು ಕಿಡ್ನಿ ಹೋಯಿತು. ವೈದ್ಯರು ಗುಣಪಡಿಸುವುದಕ್ಕೆ ಸಾಧ್ಯವೇ ಇಲ್ಲ ಎಂದು ಹೇಳಿದರು. ನಾನು ಐಎಎಸ್ ಆಗಿದ್ದರಿಂದ ವೈದ್ಯರು ನನಗೆ ಹತ್ತಿರವಾಗಿದ್ದರು. ನನ್ನ ತಂದೆಗೆ ಕೊಡುತ್ತಿರುವ ಔಷಧಿಗಳ ಬಗ್ಗೆ ತಿಳಿದುಕೊಳ್ಳುತ್ತಿದ್ದೆ. ಕೊನೆಗೆ ನಾನೇ ಔಷಧಿ ಕಂಡು ಹಿಡಿದು ನನ್ನ ತಂದೆಯ ಮೇಲೆ ಪ್ರಯೋಗ ಮಾಡಿದೆ. ಕಡಿಮೆಯಾಯಿತು.

ಇದಕ್ಕಿಂತ ಘೋರ ಎಂದರೆ ನನ್ನ ಮಗನಿಗೆ ರಕ್ತದ ಕ್ಯಾನ್ಸರ್ ತಗುಲಿತು. ಆಗಲೂ ಸಹಿತ ನಾನೇ ಕಂಡು ಹಿಡಿದ ಔಷಧಿ ಕೊಡತೊಡಗಿದೆ. ಅದರ ಜತೆಗೆ 'ಇಂಗ್ಲಿಷ್ ಔಷಧಿಯನ್ನೂ ಕೊಡುತ್ತಿದ್ದೆ. ಈಗ ಅವನು ಅರಾಂ ಇದ್ದಾನೆ ಲಂಡನ್‌ನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ಕ್ಯಾನ್ಸರನ್ನು ಸಂಪೂರ್ಣ ಗುಣಮುಖ ಮಾಡುತ್ತೇನೆ ಎಂದು ಹೇಳುವುದಿಲ್ಲ. ಆದರೆ ಅದನ್ನು ತಡೆಗಟ್ಟಬಹುದು. ಹೀಗೆ ಬಹಳ ಜನರು ನನ್ನ ಹತ್ತಿರ ಔಷಧಿಗಳನ್ನು ತೆಗೆದುಕೊಂಡು ಗುಣಮುಖರಾಗಿದ್ದಾರೆ.

ಇದೀಗ ಐಬಿಎಂ ಹಾಗೂ ಆಪಲ್ ಕಂಪನಿಗಳು ನನ್ನ ವೈದ್ಯಕೀಯ ಉತ್ಪನ್ನಗಳ ಮಾರುಕಟ್ಟೆ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಅವೆಲ್ಲ ಸ್ನ್ಯಾಪ್‌ಡೀಲ್‌ನಲ್ಲಿ ಸಿಗುತ್ತವೆ.

### ಔಷಧಿಗಳು ಲಭ್ಯ

ಸಂಯುಕ್ತ ಕರ್ನಾಟಕದ ಬೆಂಗಳೂರು, ಹುಬ್ಬಳ್ಳಿ, ಸೇರಿದಂತೆ ಎಲ್ಲ ಪ್ರಮುಖ ಜಿಲ್ಲಾ ಕೇಂದ್ರಗಳ ಸಂಯುಕ್ತ ಕರ್ನಾಟಕ ಕಚೇರಿಗಳಲ್ಲಿ ಈ ಔಷಧಿಗಳ ಲಭ್ಯತೆ ಕುರಿತು ಮಾತುಕತೆ ಆರಂಭವಾಗಿದೆ.



ಬೆಂಗಳೂರಿನ ಸಂಯುಕ್ತ ಕರ್ನಾಟಕ ಕಾರ್ಯಾಲಯಕ್ಕೆ ಭೇಟಿ ನೀಡಿದ್ದ ಹಿರಿಯ ಐಎಎಸ್ ಅಧಿಕಾರಿ ರಾಜೂ ಅವರನ್ನು ಲೋಕಶಿಕ್ಷಣ ಟ್ರಸ್ಟ್‌ನ ಅಧ್ಯಕ್ಷ ಉಮೇಶ್ ಭಟ್ ಸನ್ಮಾನಿಸಿ ಗೌರವಿಸಿದರು. ಲೋಕಶಿಕ್ಷಣ ಟ್ರಸ್ಟ್ ಕಾರ್ಯದರ್ಶಿ ಎಚ್.ಎಸ್.ನಾರಾಯಣಮೂರ್ತಿ, ಸಂಯುಕ್ತ ಕರ್ನಾಟಕ ಪತ್ರಿಕೆಯ ಪ್ರಧಾನ ಸಂಪಾದಕ ಹುಣಸವಾಡಿ ರಾಜನ್, ಡಾ. ಶ್ರೀನಿವಾಸ ಮೂರ್ತಿ ಈ ಸಂದರ್ಭದಲ್ಲಿದ್ದರು.

ಇನ್ನೊಂದು ನನ್ನ ಔಷಧಿ ತೆಗೆದುಕೊಂಡವರು 'ಮಿರ್ಯಾಕಲ್' ಎಂದು ಹೇಳುತ್ತಿದ್ದರು. ಅದಕ್ಕೆ ನಾನು ಉತ್ಪನ್ನಗಳಿಗೆ ಮಿರ್ಯಾಕಲ್ ಡ್ರಿಂಕ್ಸ್ ಎಂದು ಹೆಸರಿಟ್ಟಿದ್ದೇನೆ. ಮುಂದಿನ ಪೀಳಿಗೆಗೆ ಆಯುರ್ವೇದ ಔಷಧಿಗಳ ಬಗ್ಗೆ ತಿಳಿಯಬೇಕು, ಪರಿಸರದ ಬಗ್ಗೆ ಗಮನವಿರಬೇಕು ಎನ್ನುವುದು ನನ್ನ ಮಹದಾಸೆ ಎಂದು ರಾಜು ಅವರು ತಿಳಿಸುತ್ತಾರೆ.

ರಾಜೂ ಅವರನ್ನು ಸನ್ಮಾನಿಸಿ ಮಾತನಾಡಿದ ಲೋಕ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಉಮೇಶ್ ಭಟ್ ಅವರು, ಐಎಎಸ್ ಅಧಿಕಾರಿಗಳು ವೇದಗಳನ್ನು ನಂಬುವುದು ಅಪರೂಪ. ಅದಕ್ಕೆಲ್ಲ ಸಂಸ್ಕಾರ ಬೇಕು. ಇಂದು ಸಣ್ಣ ಕಾಯಿಲೆಯೆಂದು ಹೋದರೂ ರಕ್ತಪರೀಕ್ಷೆ, ಸ್ಕ್ಯಾನಿಂಗ್ ಮುಂತಾದ ಅನಗತ್ಯ ಪರೀಕ್ಷೆಗಳನ್ನು ಮಾಡುತ್ತಾರೆ. ಹೆಚ್ಚು ಅನಿಸುವಷ್ಟು ಹಣ ಇಸಿದುಕೊಳ್ಳುತ್ತಾರೆ. ಆಯುರ್ವೇದ ಪದ್ಧತಿ ಇನ್ನೂ ಹೆಚ್ಚು ಪ್ರಚಾರದಲ್ಲಿ ಬರುವುದು ಅನಿವಾರ್ಯವಾಗಿದೆ. ಓರ್ವ ಐಎಎಸ್ ಅಧಿಕಾರಿ ಈ ಪದ್ಧತಿಯನ್ನು ಅಳವಡಿಸಿಕೊಂಡು ಔಷಧಿಗಳನ್ನು ತಯಾರಿಸಿ ರೋಗಗಳನ್ನು ಗುಣಪಡಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ. ತಮ್ಮ ಕಾರ್ಯಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ ಎಂದರು. ನಂತರ ರಾಜೂ ಹಾಗೂ ಡಾ. ಶ್ರೀನಿವಾಸ ಮೂರ್ತಿ ಅವರನ್ನು ಸನ್ಮಾನಿಸಿದರು.

ಲೋಕ ಶಿಕ್ಷಣ ಟ್ರಸ್ಟ್‌ನ ಕಾರ್ಯದರ್ಶಿ ಎಚ್.ಎಸ್. ನಾರಾಯಣಮೂರ್ತಿ, ಸಂಯುಕ್ತ ಕರ್ನಾಟಕ ಪತ್ರಿಕೆಯ ಪ್ರಧಾನ ಸಂಪಾದಕ ಹುಣಸವಾಡಿ ರಾಜನ್, ಕರ್ಮವೀರ ಸಂಪಾದಕ ಅನಿಲ್ ಕುಮಾರ್ ಸೇರಿದಂತೆ ಎಲ್ಲ ವಿಭಾಗಗಳ ಸಿಬ್ಬಂದಿ ಉಪಸ್ಥಿತರಿದ್ದರು. ಗ್ರಂಥಾಲಯದ ಮುಖ್ಯಸ್ಥ ರಾಜಾರಾಂ ಸ್ವಾಗತಿಸಿ ಪರಿಚಯಿಸಿದರು.